# ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ

ಕೆಎಸ್‌ಕ್ಯೂಎಎಸಿ, ಮಲ್ಲೇಶ್ವರಂ, ಬೆಂಗಳೂರು–560003.

# KARNATAKA SCHOOL EXAMINATION AND ASSESSMENT BOARD

KSQAAC, Malleshwaram, Bengaluru–560003.

## ಮೌಲ್ಯಾಂಕನ – ಮಾರ್ಚ್ 2024 – ಮಾದರಿ ಪ್ರಶ್ನೋತ್ತರ ಪತ್ರಿಕೆ

## Assessment - March 2024 Model Paper

**ತರಗತಿ : 9** | **ವಿಷಯ : ಪ್ರಥಮ ಭಾಷೆ ಕನ್ನಡ** | **ಅಂಕಗಳು : 100**
**ಸಮಯ : 3 ಗಂಟೆ 15 ನಿಮಿಷ**

**ವಿದ್ಯಾರ್ಥಿಗಳು ಭರ್ತಿ ಮಾಡಬೇಕಾಗಿರುವ ಮಾಹಿತಿ**

ವಿದ್ಯಾರ್ಥಿಯ ಹೆಸರು : ______________________

ವಿದ್ಯಾರ್ಥಿಯ SATS ಸಂಖ್ಯೆ : [ | | | | | | | | ] ವಿದ್ಯಾರ್ಥಿಯ ಸಹಿ : ______________

**ಕೊಠಡಿ ಮೇಲ್ವಿಚಾರಕರು ಭರ್ತಿ ಮಾಡಬೇಕಾಗಿರುವ ಮಾಹಿತಿ**

ಶಾಲೆಯ ಡೈಸ್ ಕೋಡ್ : [ | | | | | | | | | | ]

ಶಾಲೆಯ ಹೆಸರು : ______________________

ಕ್ಲಸ್ಟರ್ : ______________ ಬ್ಲಾಕ್ : ______________ ಜಿಲ್ಲೆ : ______________

ಶಾಲೆಯ ವಿಧ : ಸರ್ಕಾರಿ ☐ ಅನುದಾನಿತ ☐ ಅನುದಾನ ರಹಿತ ☐

(ಅನ್ವಯಿಸುವ ಮಾಹಿತಿಗೆ "✓" ಗುರುತು ಹಾಕಿರಿ)

ಕೊಠಡಿ ಮೇಲ್ವಿಚಾರಕರ ಸಹಿ : ______________

**ಮೌಲ್ಯಮಾಪನ ಸಮಯದಲ್ಲಿ ಶಿಕ್ಷಕರು ಭರ್ತಿ ಮಾಡಬೇಕಾದ ಮಾಹಿತಿ**

| ಪ್ರಶ್ನೆ ಸಂಖ್ಯೆ | ಪಡೆದ ಅಂಕಗಳು | ಪ್ರಶ್ನೆ ಸಂಖ್ಯೆ | ಪಡೆದ ಅಂಕಗಳು | ಪ್ರಶ್ನೆ ಸಂಖ್ಯೆ | ಪಡೆದ ಅಂಕಗಳು |
|---|---|---|---|---|---|
| 1 | | 14 | | 27 | |
| 2 | | 15 | | 28 | |
| 3 | | 16 | | 29 | |
| 4 | | 17 | | 30 | |
| 5 | | 18 | | 31 | |
| 6 | | 19 | | 32 | |
| 7 | | 20 | | 33 | |
| 8 | | 21 | | 34 | |
| 9 | | 22 | | 35 | |
| 10 | | 23 | | 36 | |
| 11 | | 24 | | 37 | |
| 12 | | 25 | | 38 | |
| 13 | | 26 | | | |
| ಒಟ್ಟು ಅಂಕಗಳು | | ಒಟ್ಟು ಅಂಕಗಳು | | ಒಟ್ಟು ಅಂಕಗಳು | |
| | | | | ಒಟ್ಟು ಗಳಿಸಿದ ಅಂಕ | |

ಒಟ್ಟು ಗಳಿಸಿದ ಅಂಕಗಳು (ಅಕ್ಷರಗಳಲ್ಲಿ) ______________________

ಮೌಲ್ಯಮಾಪಕರ ಸಹಿ : ______________

# ಕನ್ನಡ ಪ್ರಥಮ ಭಾಷೆ

**I.** **ಕೆಳಗಿನ ಪ್ರಶ್ನೆಗಳಿಗೆ ಅಥವಾ ಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ, ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ.** **6x1=6**

**1.** **ಅಂಬೇರ ಜಯಪುರದ ಪೂರ್ವ ಕಾಲದ ರಾಜಧಾನಿ ಈ ವಾಕ್ಯದಲ್ಲಿರುವ ಅನುಸ್ವಾರ ಸಹಿತ ಪದ**

A. ಅಂಬೇರ B. ಜಯಪುರದ

C. ಪೂರ್ವಕಾಲದ D. ರಾಜಧಾನಿ

ಉತ್ತರ: ☐ ____________________

**2.** **'ಅರಮನೆಯ ಮೇಲಿನ ಅಂಗಳವನ್ನೇರಿ ಹೋದರೆ ದೊಡ್ಡದೊಂದು ಸಭಾಂಗಣ ಬರುತ್ತದೆ' ಇಲ್ಲಿರುವ ಸಭಾಂಗಣ ಪದವು ಈ ಸಂಧಿಗೆ ಉದಾಹರಣೆ –**

A. ಲೋಪ ಸಂಧಿ B. ಆಗಮ ಸಂಧಿ

C. ಸವರ್ಣದೀರ್ಘ ಸಂಧಿ D. ಗುಣ ಸಂಧಿ

ಉತ್ತರ: ☐ ____________________

**3.** **'ತಲಕಾಡಿನಲ್ಲಿ ಶಾಂತಿ ಸ್ಥಾಪನೆ ಮಾಡಿ, ನಾಲ್ಕು ದಿನಗಳಾದ ಮೇಲೆ ರಾಜಧಾನಿಗೆ ಹಿಂದಿರುಗೋಣ' ಇಲ್ಲಿ 'ಸ್ಥಾಪನೆ ಮಾಡಿ' ಪದವು ಈ ಸಮಾಸದ ಉದಾಹರಣೆ**

A. ತತ್ಪುರುಷ ಸಮಾಸ B. ಕರ್ಮಧಾರೆಯ ಸಮಾಸ

C. ಕ್ರಿಯಾ ಸಮಾಸ D. ಅಂಕಿ ಸಮಾಸ

ಉತ್ತರ: ☐ ____________________

**4.** **ಡಾಕ್ಟರ್ ಬಿ.ಜಿ.ಎಲ್.ಸ್ವಾಮಿ ಕರ್ನಾಟಕದ ಪ್ರಸಿದ್ಧ 'ಸಾಹಿತಿಗಳಲ್ಲಿ' ಒಬ್ಬರಾಗಿದ್ದರು ಈ ವಾಕ್ಯದಲ್ಲಿರುವ ಸಾಹಿತಿಗಳಲ್ಲಿ ಪದದಲ್ಲಿರುವ ವಿಭಕ್ತಿ**

A. ಪ್ರಥಮ ವಿಭಕ್ತಿ B. ತೃತೀಯ ವಿಭಕ್ತಿ

C. ಪಂಚಮಿ ವಿಭಕ್ತಿ D. ಸಪ್ತಮಿ ವಿಭಕ್ತಿ

ಉತ್ತರ: ☐ ____________________

**5.** **ಬಿನ್ನಹ ಗುರುವೇ ಧ್ಯಾನಕ್ಕೆ ಬೇಸರ ಆದಾಗ ನಿನ್ನ ನಾದಿಯ ಮಾಡಿಕೊಂಡು, ಕನ್ನಡದೊಳಗೊಂದು ಕಥೆಯ ಪೇಳುವೆನು. ಇಲ್ಲಿ ಬಿನ್ನಹ ಪದದ ತತ್ಸಮ ರೂಪ.**

A. ಬಿನ್ನಾಣ

B. ವಿಜ್ಞಾಪನಾ

C. ಭಿನ್ನೈಸು

D. ವಿಜ್ಞಾನ

ಉತ್ತರ: ☐ ____________________

**6.** **'ತಾಯಿಯು ಅಡುಗೆಯನ್ನು ಮಾಡುತ್ತಾಳೆ', ಇಲ್ಲಿ ಮಾಡುತ್ತಾಳೆ ಪದದ ಧಾತು**

A. ಮಾಡುತ್ತಾ

B. ಮಾಡ

C. ಮಾಡು

D. ಮಾಡಿ

ಉತ್ತರ: ☐ ____________________

**II.** **ನೀಡಿರುವ ಗದ್ಯಭಾಗವನ್ನು ಓದಿಕೊಂಡು ಕೆಳಗಿನವುಗಳಲ್ಲಿ ಮೊದಲ ಎರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧಿ ಪದವನ್ನು ಬರೆಯಿರಿ.** **4x1=4**

**ಸಾವಿರ ಮೂರ್ಖರಿಗಿಂತಲೂ ಒಬ್ಬ ಪಂಡಿತನೇ ಲೇಸೆಂದು ತಿಳಿದು ಅವನನ್ನು ಆಧರಿಸುವೆಯಾ? ಏಕೆಂದರೆ ಕಷ್ಟಕಾಲದಲ್ಲಿ ಪಂಡಿತನೊಬ್ಬನೇ ಸರಿಯಾದ ಉಪಾಯವನ್ನು ಬೋಧಿಸಿ ಕಾರ್ಯವನ್ನು ನಿರ್ವಹಿಸಬಲ್ಲ ಮೂರ್ಖರ ಸಂಖ್ಯೆ ಸಾವಿರವಿರಲಿ, ಹತ್ತು ಸಾವಿರವೇ ಇರಲಿ, ರಾಜನಿಗೆ ಅದರಿಂದ ಯಾವ ಸಹಾಯವು ಆಗುವುದಿಲ್ಲ. ಮೇಧಾವಿಯೂ, ಶೂರನೂ, ಕಾರ್ಯದಕ್ಷನೂ, ರಾಜ್ಯಶಾಸ್ತ್ರ ವಿಶಾರದನೂ ಆದ ಸಚಿವನು ಒಬ್ಬನೇ ಆದರೂ ರಾಜನಿಗಾಗಲಿ ರಾಜ್ಯದ ಆಡಳಿತವನ್ನು ನಿರ್ವಹಿಸುವವನಿಗಾಗಲೀ ಮಹತ್ತರವಾದ ಶ್ರೇಯಸ್ಸನ್ನು ತಂದುಕೊಡಬಲ್ಲನು.**

7. ಪಂಡಿತ : ಪಂಡಿತರು :: ಮೇಧಾವಿ : ____________________

8. ಕಾರ್ಯ : ಕೆಲಸ :: ಶ್ರೇಯಸ್ಸು : ____________________

9. ಸಾವಿರವಿರಲಿ, : ಅಲ್ಪವಿರಾಮ ಚಿಹ್ನೆ :: ಆಧರಿಸುವೆಯಾ? : ____________________

10. ಒಬ್ಬ : ಸಂಖ್ಯೇಯ ವಾಚಕ :: ಹತ್ತು : ____________________

**III. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ :** **7x1=7**

**ಹಲವರು ತಲಕಾಡು ನಗರವನ್ನು ಲೂಟಿ ಮಾಡಬೇಕೆಂದು ಇಚ್ಛಿಸಿದರು. ಆದರೆ ವಿಷ್ಣುವರ್ಧನ ಭೂಪಾಲ ಅದಕ್ಕೆ ಆಸ್ಪದ ಕೊಡಲಿಲ್ಲ. "ಕೆಚ್ಚೆದೆಯ ಕಟ್ಟಾಳುಗಳೇ, ಇದು ನಮ್ಮ ವಿಜಯದ ದಿನವೆಂದು ತಿಳಿದು ಮೈ ಮರೆಯಬಾರದು. ಇದು ನಮ್ಮ ಸತ್ವ ಪರೀಕ್ಷೆಯ ಸಮಯವೂ ಹೌದು. ಆದ್ದರಿಂದ ಎಷ್ಟೇ ಸ್ಥಾನಮಾನ ಪದವಿ ಪ್ರಶಸ್ತಿಗಳು ಲಭಿಸಲಿ, ಮಾನವ ತನ್ನ ಮಾನವೀಯ ಗುಣಗಳನ್ನು ಮಾತ್ರ ಗಾಳಿಯಲ್ಲಿ ತೂರಿ ಬಿಡಬಾರದು. ಸೆರೆಸಿಕ್ಕ ಸೈನಿಕರ ಮೇಲೆ ದೌರ್ಜನ್ಯ ನಡೆಸುವುದು ಯೋಧ ಧರ್ಮ ಅಲ್ಲ. ಸೋತ ಸಾಮ್ರಜ್ಯವನ್ನು ಲೂಟಿ ಮಾಡುವುದು ಯುದ್ಧ ಧರ್ಮ ಅಲ್ಲ....."**

11. ವಿಷ್ಣುವರ್ಧನ ಭೂಪಾಲನು ಯಾವುದಕ್ಕೆ ಆಸ್ಪದ ಕೊಡಲಿಲ್ಲ ?

12. ಮಾನವ ಯಾವುದನ್ನು ಗಾಳಿಯಲ್ಲಿ ತೂರಿಬಿಡಬಾರದು ?

13. ಯಾವುದು ಯೋಧ ಧರ್ಮ ಅಲ್ಲ ?

14. ವಿಜಯದ ದಿನವೆಂದು ಯೋಧರು ಮೈಮರೆಯಬಾರದು ಏಕೆ ?

**ಕೊಟ್ಟಿರುವ ಪದ್ಯಭಾಗವನ್ನು ಓದಿಕೊಂಡು 15 ಮತ್ತು 16ನೇ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ :–**

**ಮಾತಿನೊಳಗೆ ಮಾತಿಲ್ಲದವನ ಸ್ನೇಹ**
**ಜಾತಿ ಜನ್ಮಕ ಬೇಡ**
**ಹೀನ ಮನುಷ್ಯನ ಸ್ನೇಹ ಮಾಡಿ**
**ನೀನು ಕೆಡಲಿಬೇಡ.**

15. ತತ್ತ್ವ ಪದಕಾರರು ಯಾರ ಸ್ನೇಹ ಜಾತಿಜನ್ಮಕ ಬೇಡ ಎಂದಿದ್ದಾರೆ ?

16. ಯಾರ ಸ್ನೇಹವನ್ನು ಮಾಡಿ ಕೆಡಬಾರದು ?

17. ಕಡ್ಡಿ ಕಡ್ಡಿ ಕೂಡಿಸಿ ಗೂಡು ಕಟ್ಟುವುದು ಬಿರುಗಾಳಿಯ ವಿರುದ್ಧ ಯುದ್ಧ ಸಾರುವುದು. (ಸುಳಿವು ಆಧರಿಸಿ ಉತ್ತರಿಸಿ) ಬಿರುಗಾಳಿಯ ವಿರುದ್ಧ ಯುದ್ಧ ಸಾರುವವರು ಯಾರು ?

**IV. ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 10 x 2 = 20**

**(ಪ್ರಶ್ನೆ 18 ಮತ್ತು 19ಕ್ಕೆ ನೀಡಿರುವ ಗದ್ಯ ಓದಿಕೊಂಡು ಉತ್ತರಿಸಿ.)**

**ಪ್ರಿಯ ಅನುಜ, ಉಪಾಯದಿಂದ ಹಣ ಕೀಳುವ ವೈದ್ಯನನ್ನು, ಒಡೆಯನನ್ನೇ ದೂಷಿಸುವ ಸೇವಕನನ್ನು, ಖಜಾನೆಯ ಐಶ್ವರ್ಯದ ಮೇಲೆ ಕಣ್ಣಿಟ್ಟಿರುವ ಸೈನಿಕನನ್ನು ರಾಜನು ತ್ಯಜಿಸಬೇಕು ಅವರಿಗೆ ಉಗ್ರ ಶಿಕ್ಷೆ ಕೊಡಬೇಕು. ಇಲ್ಲದಿದ್ದರೆ ಆತ ಆ ವ್ಯಕ್ತಿಗಳ ಕುತಂತ್ರದಿಂದಲೇ ವಿಪತ್ತಿನಲ್ಲಿ ಸಿಕ್ಕಿಕೊಳ್ಳಬಹುದು. ಭರತ, ನಿನ್ನ ಸತ್ಕಾರದಿಂದ ಸಂತೃಪ್ತನು ಶೂರನು ಸೇನೆಯನ್ನು ವ್ಯವಸ್ಥೆಗೊಳಿಸುವುದರಲ್ಲಿ ಸಮರ್ಥನು ಆದವನನ್ನು ಸೇನಾಪತಿಯನ್ನಾಗಿ ನೇಮಿಸಿರುವೆಯಾ? ಅವನು ಧೀರನಾಗಿರಬೇಕು; ಲಂಚ ಮೊದಲಾದವಕ್ಕೆ ಆಸೆ ಪಡದ ಮನಃ ಶುದ್ಧಿಯುಳ್ಳವನಾಗಿರಬೇಕು, ಕಾರ್ಯದಕ್ಷನಾಗಿರಬೇಕು.**

18. ರಾಜನು ಯಾವ ಮೂರು ವ್ಯಕ್ತಿಗಳನ್ನು ತ್ಯಜಿಸಬೇಕು ?

19. ಸೇನಾಪತಿಯಾಗಬೇಕಾದವನ ಗುಣ ಸ್ವಭಾವ ಹೇಗಿರಬೇಕು ?

**ಪ್ರಶ್ನೆ ಸಂಖ್ಯೆ 20 ಮತ್ತು 21ಕ್ಕೆ ಚಿತ್ರ ಆಧರಿಸಿ ಉತ್ತರಿಸಿ.**



20. ಚಿತ್ರದಲ್ಲಿರುವ ಜನಪದ ಕಲಾ ಪ್ರಕಾರದ ಪ್ರದರ್ಶನ ಯಾವ ಯಾವ ಸಂದರ್ಭಗಳಲ್ಲಿ ನಡೆಯುತ್ತದೆ?

21. ಈ ಕಲಾವಿದರ ವೇಷ ಭೂಷಣ ಹೇಗಿರುತ್ತದೆ ?

**(ಪ್ರಶ್ನೆ 22 ಮತ್ತು 23ಕ್ಕೆ ನೀಡಿರುವ ಪದ್ಯ ಆದರಿಸಿ ಉತ್ತರಿಸಿ.)**

**ಗುರುವಿಂದು ಬೆಸಸೆ ಭಿಕ್ಷೆಗೆ**
**ಬರುತಿರೆ ಪಿಡಿ ತಂದರೆ ಮೈನಾ ದೆಸೆಗೆ ಭಯಂ**
**ಪುರುಳಿಲ್ಲ ನಿನ್ನ ಕೇಡಂ**
**ಪರಿವೀಕ್ಷಿಸಿ ಕರುಣದಿಂದೆ ತಲ್ಲಣಿಸಿದ ಪೆಂ**

22. ಅಭಯ ರುಚಿಯು ತನಗೆ ಯಾವುದರ ಬಗೆಗೆ ಸ್ವಲ್ಪವೂ ಭಯವಿಲ್ಲ ಎಂದು ಹೇಳಿದ್ದಾನೆ ?

23. ಅಭಯ ರುಚಿ ತಲ್ಲಣಗೊಳ್ಳಲು ಕಾರಣವೇನು ?

24. ಮನೆಯಲ್ಲಿ ಇದ್ದ ಸೃಜನಶೀಲ ವಾತಾವರಣ ಪಂಡರಿ ಬಾಯಿಯವರ ಕಲಾವಿದೆ ವ್ಯಕ್ತಿತ್ವವನ್ನು ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿತು ಹಾಗಾದರೆ ಪಂಡರಿಬಾಯಿಯವರು ಕಲಾವಿದೆಯಾಗಿ ರೂಪುಗೊಳ್ಳಲು ಅವರ ಮನೆಯಲ್ಲಿದ್ದ ಸೃಜನಶೀಲ ವಾತಾವರಣ ಎಂತಹದು ?


25. ಲಾಂಚು ಬರುವವರಿಗೆ ಹೊತ್ತು ಕಳೆಯಲು ಹೊಳೆದಂಡೆಯಲ್ಲಿ ನಿಂತಿರುವ ಜನರು ವಿವಿಧ ಚಟುವಟಿಕೆಗಳನ್ನು ಮಾಡುತ್ತಿರುತ್ತಾರೆ ಏನೆಲ್ಲ ಚಟುವಟಿಕೆಗಳನ್ನು ಮಾಡಬಹುದು ಯೋಚಿಸಿ ಬರೆಯಿರಿ.

26. ನನ್ನಾಸೆ ಕವನದ ಪ್ರಕಾರ ಮತ್ತೊಬ್ಬರಿಗೆ ಬೆಳಕು ನೀಡಲು ತನ್ನನ್ನೇ ಸುಡುವ ಬತ್ತಿ ನಾನಾಗಬೇಕು ಹಾಗಾದರೆ ಪುಣ್ಯವಂತರಿಗೆ ನೆರಳಾಗಲು ಹಾಗೂ ದಾಹಗೊಂಡವರ ತನುವ ತಣಿಸಲು ಏನಾಗಬೇಕು ?

27. "ಕುಡಿ ತಮ್ಮಾ, ಜೀವ ಬದುಕ್ಲಿ, ಮೊದ್ಲು ಜೀವಕ್ಕೆ ಯಾವ ಕುಲಾನೂ ಇಲ್ಲ, ಗಾಳಿಗೆ ಕುಲಾ ಅದೇನು ತಮ್ಮಾ, ನೀರಿಗೆ ಕುಲಾ ಅದೇನು ತಮ್ಮಾ, ನೆಲಕ್ಕೆ ಕುಲಾ ಅದೇನು ಅದು ನಾವು ಮಾಡಿಕೊಂಡದ್ದು ಕುಡಿ".
ಇದರ ಅರ್ಥ ನಿಮ್ಮ ಮಾತುಗಳಲ್ಲಿ ಬರೆಯಿರಿ.

**V. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.** **2 x 3 = 6**

28. ಚಿತ್ರದಲ್ಲಿರುವ ಸಾಹಿತಿಯನ್ನು ಗುರುತಿಸಿ ಕಾಲ, ಸ್ಥಳ, ಕೃತಿ, ಪ್ರಶಸ್ತಿಗಳ ಕುರಿತು ಬರೆಯಿರಿ.



29. ನಡುಗನ್ನಡದ ಪ್ರಮುಖ ಕವಿಗಳಲ್ಲಿ ಒಬ್ಬನಾದ ರತ್ನಾಕರ ವರ್ಣಿಯು ಕನ್ನಡ ಸಾಂಗತ್ಯ ಕವಿಗಳಲ್ಲಿ ಅಗ್ರಗಣ್ಯ. ಅಪ್ಪಟ ದೇಸಿ ಛಂದಸ್ಸಾದ ಸಾಂಗತ್ಯದಲ್ಲಿ ಬೃಹತ್ ಕಾವ್ಯ ರಚಿಸಿದ್ದಾನೆ. ಈ ಕವಿಯ ಕಾಲ, ಸ್ಥಳ, ಕೃತಿ ಮತ್ತು ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ

**VI. ಕೆಳಗಿನ ಪದ್ಯ ಭಾಗಕ್ಕೆ ಪ್ರಸ್ತಾರ ಹಾಕಿ ಗಣ ವಿಭಾಗ ಮಾಡಿ ಛಂದಸ್ಸಿನ ಹೆಸರನ್ನು ಬರೆಯಿರಿ.** **1 x 3 = 3**

30. ಮಲ್ಲಿಗೆಯಲ್ಲದೆ ಸಂಪಗೆ
ಯಲ್ಲದೆ ದಾಳಿಂಬ ಮಲ್ಲದಪ್ಪುವ ಚೆಂದಂ

**VII. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ ಲಕ್ಷಣ ಬರೆದು ಸಮನ್ವಯಗೊಳಿಸಿ.** **1 x 3 = 3**

31. "ಬಾನಿನಲ್ಲಿ ಗಾಳಿಪಟಗಳು ಹಕ್ಕಿಗಳಂತೆ ಹಾರಾಡುತ್ತಿದ್ದವು"

**VIII. ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ವದೊಂದಿಗೆ ವಿಸ್ತರಿಸಿ ಬರೆಯಿರಿ.** **1 x 3 = 3**

32. ತುಂಬಿದ ಕೊಡ ತುಳುಕುವುದಿಲ್ಲ

ಅಥವಾ

ಕೊಟ್ಟದ್ದು ತನಗೆ, ಬಚ್ಚಿಟ್ಟದ್ದು ಪರರಿಗೆ

**IX. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ. 6x3=18**

33. "ಮಾನವತೆಯೇ ವಿಶ್ವ ಅನುಸರಿಸಬೇಕಾದ ಮಾರ್ಗ"

34. "ಕುತಂತ್ರವನ್ನು ತಂತ್ರಗಾರಿಕೆಯಿಂದಲೇ ಮಣಿಸಬೇಕು"

35. "ನೀನತ್ಯಂತ ಕರುಣಿ"

36. "ಅದಕೆ ತಲೆವಾಗುವುದೆ ಸೃಷ್ಟಿಯೊಳಮರ್ಮ"

37. "ಬೆಳೆ ಬೆಳೆಯುತ್ತ ದಿವಿನಾದೆ"

38. ಬಡತನದ ಹೊತ್ತಾನೆ ದೊರಕಿ ಫಲವೇನು"

**X.** **ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ.** **1x4=4**

39. ಜಾತಿ – ಕುಲ – ಮತ ________________________

________________________

________________________

________________________ ಗುಡುಗಬೇಡ

ಅಥವಾ

ಉನ್ನತೋನ್ನತ ________________________

________________________

________________________

________________________ ಬೆನ್ನಟ್ಟಬೇಕು.

**XI.** **ಕೆಳಗಿನ ಪದ್ಯಭಾಗವನ್ನು ಓದಿ ಅರ್ಥ ಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನು ಆಧರಿಸಿ ಸಾರಾಂಶ ಬರೆಯಿರಿ.** **1x4=4**

40. ಪದನಱಿದು ನುಡಿಯಲುಂ ನುಡಿ
ದುದನಱಿದಾರಯಲುಮಾರ್ಪರಾ ನಾಡವರ್ಗಳ್
ಚದುರರ್ ನಿಜದಿಂ ಕುಱಿತೋ
ದದೆಯುಂ ಕಾವ್ಯ ಪ್ರಯೋಗ ಪರಿಣಿತ ಮತಿಗಳ್

________________________

________________________

________________________

________________________

________________________

________________________

________________________

**XII. ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **2x4=8**



41. ಜಯಪುರದಲ್ಲಿರುವ ಈ ಸ್ಮಾರಕದ ವಿಶೇಷತೆಯನ್ನು ಪರಿಚಯ ಮಾಡಿಕೊಡಿ.

ಅಥವಾ

"ಈ ಸ್ಮಾರಕವು ಗಣಿತಕ್ಕೂ, ಸೂಕ್ಷ್ಮ ಪರಿಶೀಲನೆಗೂ ಹಿರಿಯರು ಸಲ್ಲಿಸಿದ ಕಾಣಿಕೆ" ಈ ಹೇಳಿಕೆಯನ್ನು ಸಮರ್ಥಿಸಿ ಬರೆಯಿರಿ.

42. ಮೋಹ ಮುಸುರಿದ ಬುದ್ಧಿ ಸರ್ವನಾಶದ ಸಿದ್ಧಿ ವ್ಯಾಮೋಹವನ್ನು ತೊರೆದು ಬಾಳಬೇಕು. ಏನು ಬಂದರು ಕೂಡ ತಾಳಬೇಕು॥

ಈ ಪದ್ಯವನ್ನು ಆಧಾರವಾಗಿಟ್ಟುಕೊಂಡು 'ಪಾರಿವಾಳ'ಗಳ ಕಥೆಯನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

ಅಥವಾ

"ವ್ಯಾಮೋಹ ತೊರೆದು ತಾಳ್ಮೆಯಿಂದ ಯೋಚಿಸಿ ಕಾರ್ಯಸಾಧನೆ ಮಾಡಬೇಕು" ಈ ಆಶಯವನ್ನು ವಿವರಿಸಿ ಬರೆಯಿರಿ.

**XIII. ಕೆಳಗಿನ ಗದ್ಯ ಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.** **1 x 4 = 4**

43. 'ಐನೂರು ವರ್ಷ ಹಳೆಯದಾದ ಮರವೊಂದನ್ನು ಸಸ್ಯನಾಶಕ ಬಳಸಿ ಕೊಂದ ಅಪರಾಧಕ್ಕಾಗಿ, ಅಮೆರಿಕೆಯ ಪ್ರಜೆಯಾದ ಪಾಲ್ ಕೆಲೆನ್ ಎಂಬುವವನಿಗೆ ಜಿಲ್ಲಾ ನ್ಯಾಯಾಲಯ ಒಂಬತ್ತು ವರ್ಷ ಸಜೆ ಹಾಗೂ ಒಂದು ಸಾವಿರ ಡಾಲರ್ ದಂಡ ವಿಧಿಸಿದೆ! ಸಸ್ಯನಾಶಕವನ್ನು ಮರದ ಮೇಲೆ ಸುರಿದದ್ದು ಗೊತ್ತಾದೊಡನೆಯೇ ಕೆಲೆನ್‌ನನ್ನು ಕಳೆದ ವರ್ಷ ಜೂನ್ ತಿಂಗಳಿನಲ್ಲಿ ಬಂಧಿಸಲಾಗಿತ್ತು. ಇಪ್ಪತ್ತು ಸಾವಿರ ಡಾಲರುಗಳ ಜಾಮೀನು ಒದಗಿಸಲು ಸಾಧ್ಯವಾಗದೆಹೋದುದರಿಂದ ಅವನಿನ್ನೂ ಜೈಲಿನಲ್ಲೇ ಇದ್ದಾನೆ. ಅಮೆರಿಕೆಯ ಟೆಕ್ಸಸ್ ರಾಜ್ಯದ ಹೌಸ್ಟನ್ ಎಂಬಲ್ಲಿ ನಡೆದ ಘಟನೆ ಇದು. ಈ ಕೃತ್ಯದಿಂದ ಆ ಹೆಮ್ಮರ ಅರ್ಧಕ್ಕೂ ಹೆಚ್ಚು ಭಾಗ ಸತ್ತು ಹೋಗಿದೆ. ಈ ಒಂದು ವರ್ಷದಲ್ಲಿ ಮರವನ್ನು ಉಳಿಸಲು ಅಗತ್ಯವಾದ ಕ್ರಮ ಕೈಗೊಳ್ಳುವ ಸಲುವಾಗಿ ಹೌಸ್ಟನ್ ನಗರಪಾಲಿಕೆಗೆ ಒಂದು ಲಕ್ಷಕ್ಕೂ ಹೆಚ್ಚು ಡಾಲರ್‌ಗಳ ದೇಣಿಗೆ ಬಂದಿದೆ. ಆದರೇನು? ಮರ ಹೆಚ್ಚು ಕಾಲ ಬದುಕುವ ಸಾಧ್ಯತೆ ಇಲ್ಲ. ಆ ಮರಕ್ಕೆ ಬೇಗನೆ ಪೂರ್ಣ ಆರೋಗ್ಯ ಲಭಿಸಲೆಂದು ಹಾರೈಸಿ ಸಾವಿರಾರು ಜನ ವೃಕ್ಷಪ್ರೇಮಿಗಳು ಮರದ ಬುಡದಲ್ಲಿ ಶುಭಾಶಯ ಪತ್ರಗಳನ್ನಿಡುತ್ತಿದ್ದಾರೆ ; ಮರಕ್ಕೆ ದೀರ್ಘಾಯಸ್ಸು ಕೋರಿ ಪ್ರಾರ್ಥನೆ ಸಲ್ಲಿಸುತ್ತಿದ್ದಾರೆ.'

**ಪ್ರಶ್ನೆಗಳು :**

ಅ) ಮರವನ್ನು ಕೊಂದ ಅಪರಾಧಕ್ಕಾಗಿ ಪಾಲ್‌ಕೆಲೆನ್ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ ?

ಬ) ಮರವನ್ನು ಉಳಿಸಲು ಅಮೇರಿಕನ್ನರು ಮಾಡುತ್ತಿರುವ ಪ್ರಯತ್ನಗಳೇನು ?

**XIV. ಪತ್ರಲೇಖನ** **1 x 5 = 5**

44. ನಿಮ್ಮನ್ನು ಬೀದರಿನ ಅನುಭವನಗರದ ಸರ್ಕಾರಿ ಶಾಲೆ ವಿದ್ಯಾರ್ಥಿ 'ಅಲ್ಲಮ' ಎಂದು ಭಾವಿಸಿಕೊಂಡು ನಿಮ್ಮ ಶಾಲೆಯಲ್ಲಿ ಆಚರಿಸಿದ 'ವಿಶ್ವಮಾನವ' ದಿನಾಚರಣೆಯ ವರದಿ ಪ್ರಕಟಿಸುವಂತೆ 'ಮೌಲ್ಯವಾಣಿ' ದಿನ ಪತ್ರಿಕೆಯ ಸಂಪಾದಕರಿಗೆ ಪತ್ರ ಬರೆಯಿರಿ.

ಅಥವಾ

ನಿಮ್ಮನ್ನು ಮಂಡ್ಯ ಜಿಲ್ಲೆಯ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿನಿ 'ಅಮುಕ್ತಮೌಲ್ಯ' ಎಂದು ಭಾವಿಸಿಕೊಂಡು, ನೀವು ಕೈಗೊಂಡ ಪ್ರವಾಸದ ಕುರಿತು 'ವಿಜಯಪುರ' ದಲ್ಲಿರುವ ನಿಮ್ಮ ಗೆಳತಿ 'ಅಶ್ವಿತಾ'ಳಿಗೆ ಪತ್ರ ಬರೆಯಿರಿ.

45. ಕೆಳಗಿನ ಯಾವುದಾದರೂ ಒಂದು ವಿಷಯಕ್ಕೆ 15 ವಾಕ್ಯಗಳಿಗೆ ಕಡಿಮೆ ಇಲ್ಲದಂತೆ ಪ್ರಬಂಧ ಬರೆಯಿರಿ.

ಸಾವಯವ ಕೃಷಿ ಅಥವಾ ಗ್ರಂಥಾಲಯಗಳ ಮಹತ್ವ **1 x 5 = 5**